**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ತಿ.ನರಸೀಪುರ.**

**ಓ.ಎಸ್. ನಂಃ211/2018 ಡಿ.ಡಬ್ಲೂಃ 01**

ಸಾಕ್ಷಿಯನ್ನು ಇಂದು ದಿನಾಂಕಃ **03.01.2024** ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ** ವಾದಿ ಪರ **ಎನ್.ಜಿ.ಎಂ** ವಕೀಲರಿಂದಃ

ನನ್ನ ತಂದೆಯ ಹೆಸರು ಚಿಕ್ಕವನು ಎಂದರೆ ಸಾಕ್ಷಿಯು ಚಿಕ್ಕವ ಎಂದು ನುಡಿಯುತ್ತಾರೆ. ನನ್ನ ತಂದೆಯ ತಾಯಿಯ ಹೆಸರು ನನಗೆ ಗೊತ್ತಿರುವುದಿಲ್ಲ. ಸಿಂಗನ ಕುಂಟೇಗೌಡರವರಿಗೆ ಇಬ್ಬರು ಹೆಂಡತಿಯರು ಎಂದರೆ ನನಗೆ ಗೊತ್ತಿರುವುದಿಲ್ಲ. ಸಿಂಗನ ಕುಂಟೇಗೌಡರವರ ಎರಡನೇ ಹೆಂಡತಿ ಮಗ ಎಂದರೆ ಸರಿ. ಸಿಂಗನ ಕುಂಟೇಗೌಡರವರ ಮೊದಲನೇ ಹೆಂಡತಿಯ ಮಗನ ಹೆಸರು ಸಿಂಗ್ರಿಗೌಡ ಎಂದರೆ ಸರಿ. ಮಾದೇಗೌಡ, ಸಿದ್ದಮ್ಮ, ಜವರಯ್ಯ ಮತ್ತು ಕುಂಟಪ್ಪರವರು ನಮ್ಮ ಅಕ್ಕಪಕ್ಕದ ಮನೆಯವರು ಎಂದರೆ ಸರಿ.

ದಾವಾ ಆಸ್ತಿಯನ್ನು ಸಿಂಗ್ರಿಗೌಡ ಮತ್ತು ಸಿಂಗನ ಕುಂಟೇಗೌಡ ರವರು ಜವರಯ್ಯರವರಿಗೆ ದಿನಾಂಕ **23.04.1973** ರಂದು ನೋಂದಾಯಿತ ಕ್ರಯಪತ್ರದಡಿಯಲ್ಲಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಪೂಜಾರಿ ತಮ್ಮಯ್ಯ ನನಗೆ ಗೊತ್ತು. ವಾದಿಗಳ ತಾತನ ಹೆಸರು ಪೂಜಾರಿ ತಮ್ಮಯ್ಯ ಎಂದರೆ ನನಗೆ ಗೊತ್ತಿರುವುದಿಲ್ಲ. ವಾದಿಗಳು ನಮ್ಮ ಗ್ರಾಮದ ದೇವಸ್ಥಾನದಲ್ಲಿ ಅರ್ಚಕರಾಗಿ ಪೂಜೆ ಮಾಡುತ್ತಾರೆ ಎಂದರೆ ಸರಿ.

ಸರ್ವೇ ನಂ.**306/3** ರ ಒಟ್ಟು ವಿಸ್ತೀರ್ಣ ನನಗೆ ತಿಳಿದಿರುತ್ತದೆ. ಸದರಿ ಸರ್ವೇ ನಂಬರನಲ್ಲಿ ಒಟ್ಟು **2** ಎಕರೆ **7** ಗುಂಟೆ ಜಮೀನು ಇರುತ್ತದೆ. ಸದರಿ ಜಮೀನು **1973-74** ರಲ್ಲಿ ಯಾರ ಹೆಸರಿನಲ್ಲಿ ಇತ್ತು ಎಂದರೆ ಸಾಕ್ಷಿಯು ಪುಟ್ಟಸಿದ್ದಮ್ಮರವರ ಹೆಸರಿನಲ್ಲಿ ಇತ್ತು ಎಂದು ನುಡಿಯುತ್ತಾರೆ. ಸದರಿಯವರು ನನ್ನ ತಂದೆಯ ದೊಡ್ಡಮ್ಮ ಆಗಿರುತ್ತಾರೆ. ಸದರಿಯವರು ನನಗೆ ಯಾವುದೇ ರೀತಿ ಸಂಬಂಧ ಇರುವುದಿಲ್ಲ ಹಾಗೂ ಸದರಿಯವರು ಸರ್ವೇ ನಂ.**306/3** ರ ಕ್ರಯದಾರರು ಆಗಿರುತ್ತಾರೆ ಎಂದರೆ ಸರಿಯಲ್ಲ. ಸದರಿಯವರು

ಸರ್ವೇ ನಂ.306/3 ರಲ್ಲಿ 5 ½ ಗುಂಟೆ ಜಮೀನಿಗೆ ಮಾತ್ರ ಕ್ರಯದಾರರು ಆಗಿರುತ್ತಾರೆ ಎಂದರೆ ಸರಿಯಲ್ಲ. ವಾದಿಗಳು ಕಾಡುಕೊತ್ತನ ಗ್ರಾಮದಲ್ಲಿ ಮನೆ ಕಟ್ಟಿಕೊಂಡು ವಾಸ ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು ನಮ್ಮ ಜಾಗದಲ್ಲಿ ನಾವು ಇಲ್ಲದ ಸಮಯದಲ್ಲಿ ಮನೆ ಕಟ್ಟಿಕೊಂಡು ವಾಸ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಮನೆಯನ್ನು 1973-74 ರಲ್ಲಿ ಕಟ್ಟಿಕೊಂಡು ಅಂದಿನಿಂದ ವಾಸ ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು ಇತ್ತೀಚೆಗೆ ಕಟ್ಟಿಕೊಂಡು ವಾಸ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ. ವಾದಿಗಳ ಮನೆಯ ಖಾತೆಯು ಅವರ ತಂದೆ ಜವರಯ್ಯರವರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ವಾದಿಗಳು ಕಟ್ಟಿರುವ ಮನೆಯ ಪಶ್ಚಿಮ ದಿಕ್ಕಿನಲ್ಲಿ ಖಾಲಿ ನಿವೇಶನ ತದನಂತರ ರಸ್ತೆ ಹಾಗೂ ಆದಾದ ನಂತರ ಕಾಲುವೆ ಎಂದು ಇರುತ್ತದೆ ನುಡಿಯುತ್ತಾರೆ. ವಾದಿಗೆ ಸೇರಿದ ಮನೆಯ ಪಶ್ಚಿಮ ದಿಕ್ಕಿನಲ್ಲಿ ವಾದಿಗೆ ಸೇರಿದ ಖಾಲಿ ಜಾಗ ಇದ್ದು, ತದನಂತರ ತುರುಗುನೂರು ನಾಲೆ ಇರುತ್ತದೆ ಎಂದರೆ ಸರಿಯಲ್ಲ.

ನಿಪಿ-3 ಪೋಟೋದಲ್ಲಿರುವ ಶೌಚಾಲಯವನ್ನು ವಾದಿಯು ಕಟ್ಟಿರುತ್ತಾರೆ ಎಂದರೆ ಸಾಕ್ಷಿಯು ನಾವು ಇಲ್ಲದ ಸಮಯದಲ್ಲಿ ಕಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಕಾಡುಕೊತ್ತನ ಹಳ್ಳಿ ಗ್ರಾಮದಲ್ಲಿ ನಾನು ನನ್ನ ತಂದೆ-ತಾಯಿಯೊಂದಿಗೆ ವಾಸ ಮಾಡುತ್ತಿದ್ದೇನೆ ಎಂದರೆ ಸರಿ. ನಾವು ಸರ್ವೇ ನಂ.306/3 ರಲ್ಲಿ ಮನೆ ಕಟ್ಟಿಕೊಂಡು ವಾಸ ಮಾಡುತ್ತಿದ್ದೇವೆ ಎಂದರೆ ಸರಿ. ಸದರಿ ಜಾಗದಲ್ಲಿ ಸುಮಾರು 80 ವರ್ಷಗಳಿಂದ ವಾಸ ಮಾಡುತ್ತಿದ್ದೇವೆ. ವಾದಿಗಳು ಕಟ್ಟಿದ್ದ ಮನೆ ನಮ್ಮ ಮನೆಯ ಪಕ್ಕದಲ್ಲಿ ಇರುತ್ತದೆ. ವಾದಿಗಳು ನಮ್ಮ ಜಾಗದಲ್ಲಿ ಮನೆಯನ್ನು ಕಟ್ಟಿರುವ ಬಾಬ್ತು ಪಂಚಾಯತಿಗೆ ದೂರು ನೀಡಿರುವುದಿಲ್ಲ, ಆದರೆ ವಾದಿಗಳು ಜಾಗವನ್ನು ಬಿಟ್ಟು ಕೊಡುತ್ತೇವೆ ಎಂದು ಹೇಳಿರುತ್ತಾರೆ. ವಾದಿಗಳು ಗ್ರಾಮದ ಯಜಮಾನರ ಸಮಕ್ಷಮದಲ್ಲಿ ಜಾಗವನ್ನು ಬಿಟ್ಟು ಕೊಡುವುದಾಗಿ ಹೇಳಿರುತ್ತಾರೆ. ನಾನು ಬೆಂಗಳೂರಿನಲ್ಲಿ ವಾಸ ಮಾಡುತ್ತಿರುವ ಕಾರಣ ಸದರಿಯವರ ಹೆಸರುಗಳು ನನಗೆ ಗೊತ್ತಿರುವುದಿಲ್ಲ. ನಾನು ಬೆಂಗಳೂರಿನಲ್ಲಿ ವಾಸ ಮಾಡುತ್ತಿರುವ ಕಾರಣ ಸದರಿ ಜಾಗವನ್ನು ಬಿಟ್ಟುಕೊಡಲು ನಾನು ವಾದಿಗೆ ಕೇಳಿರುವುದಿಲ್ಲ ಎಂದರೆ ಸಾಕ್ಷಿಯು ತಂದೆ ಕೇಳಿರುತ್ತಾರೆ ಎಂದು ನುಡಿಯುತ್ತಾರೆ.

ವಾದಿಗಳ ಮನೆ ಮತ್ತು ತುರುಗುನೂರು ನಾಲಾದ ನಡುವಿನ ಜಾಗ ವಾದಿಗಳಿಗೆ ಸೇರಿದ್ದರೂ ಸಹ ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೇ ನಂ.306/3 ರಲ್ಲಿ ನನ್ನ ತಂದೆಗೆ ವಿಭಜನೆ ಮುಖಾಂತರ 17 ಗುಂಟೆ ಜಾಗ ಬಂದಿರುತ್ತದೆ. ಸದರಿ 17 ಗುಂಟೆಗೆ ಸಂಬಂಧಿಸಿದಂತೆ ಖಾತೆ ಇದ್ದು, ಅದನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. 17 ಗುಂಟೆ ಜಮೀನಿನಲ್ಲಿ ಒಟ್ಟು 7 ಗುಂಟೆ ಜಮೀನನ್ನು ಮಾರಾಟ ಮಾಡಿರುತ್ತೇವೆ. ಉಳಿದ 10 ಗುಂಟೆ ಜಮೀನನ್ನು ನಾವು ನಿವೇಶನ ಮಾಡಿರುತ್ತೇವೆ. ಸದರಿ ಜಮೀನು ನಿಮ್ಮ ಮನೆಯ ಪಕ್ಕದಲ್ಲಿಯೇ ಇರುತ್ತದೆಯೇ ಎಂದರೆ ಸಾಕ್ಷಿಯು ಸ್ವಲ್ಪ ಜಾಗ ಕಾಲುವೆ ನಂತರ ಇರುತ್ತದೆ, ಸ್ವಲ್ಪ ಜಾಗ ಮನೆಯ ಪಕ್ಕದಲ್ಲಿದ್ದು, ಅದರಲ್ಲಿ ವಾದಿಗಳು ಅಕ್ರಮವಾಗಿ ಮನೆ ಕಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಮ್ಮ ಮನೆ ವಾದಿಗಳ ಮನೆ ಉತ್ತರ ಭಾಗದಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ವಾದಿಗಳ ಮನೆಯ ಪೂರ್ವ ದಿಕ್ಕಿನಲ್ಲಿ ನಮ್ಮ ಮನೆ ಇರುತ್ತದೆ. ವಾದಿಗಳ ಮನೆಯ ಪಶ್ಚಿಮ ಭಾಗದಲ್ಲಿ ಖಾಲಿ ಜಾಗ ಇದ್ದು, ತದನಂತರ ತುರುಗುನೂರು ನಾಲೆ ಇರುತ್ತದೆ ಎಂದರೆ ಸಾಕ್ಷಿಯು ಪಶ್ಚಿಮ ಜಾಗದಲ್ಲಿ ಖಾಲಿ ಜಾಗ, ರಸ್ತೆ ಮತ್ತು ತದನಂತರ ನಾಲೆ ಇರುತ್ತದೆ ಎದು ನುಡಿಯುತ್ತಾರೆ. ವಾದಿಗಳ ಮನೆಯ ಉತ್ತರ ದಿಕ್ಕಿಗೆ ಖಾಲಿ ನಿವೇಶನ ಇರುತ್ತದೆ.

ವಾದಿಗಳ ಮನೆಯ ಪೂರ್ವ ದಿಕ್ಕಿನಲ್ಲಿ ನಾವು ವಾಸ ಮಾಡುತ್ತಿರುವ ಕಾರಣ ಸದರಿಯವರ ಮನೆಯ ಪಶ್ಚಿಮ ದಿಕ್ಕಿನಲ್ಲಿ ಇರುವ ಖಾಲಿ ಜಾಗ ವಾದಿಗಳಿಗೆ ಸೇರಿರುತ್ತದೆ ಎಂದರೆ ಸರಿಯಲ್ಲ.

ನಾನು ಹಾಜರುಪಡಿಸಿರುವ ಎಲ್ಲಾ ದಾಖಲೆಗಳನ್ನು ಓದಿ ತಿಳಿದುಕೊಂಡಿರುತ್ತೇನೆ. ನಿಡಿ-2 ಕ್ರಯಪತ್ರದಡಿ ನನ್ನ ಮಾವ ಎಸ್.ಮಹದೇವರವರು 2 ಗುಂಟೆ ಜಮೀನನ್ನು ಸಿದ್ದಮಾದೇಗೌಡರವರಿಗೆ ಮಾರಾಟ ಮಾಡಿರುತ್ತಾರೆ. ನಿಡಿ-2 ಕ್ರಯಪತ್ರದಡಿ ಯಾರು ಯಾರಿಗೆ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಹಾಗೂ ಸದರಿ ದಾಖಲೆಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು

ಹಾಜರುಪಡಿಸಿರುವ ನಿಡಿ-2 ರಿಂದ 4 ಕ್ರಯಪತ್ರಗಳು ಒಂದೇ ದಿನಾಂಕದಂದು ನೋಂದಣಿ ಆಗಿರುತ್ತವೆ. ನಾನು ಹಾಜರುಪಡಿಸಿದ ನಿಡಿ-2 ರಿಂದ 7 ರ ಕ್ರಯಪತ್ರಗಳಿಗೂ ಈ ದಾವೆಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

ನಿಡಿ-8 ರ ಪ್ರಕಾರ ಸರ್ವೇ ನಂ.306/3 ರಲ್ಲಿ 3 ¼ ಗುಂಟೆ ಜಮೀನನ್ನು ಜವರಯ್ಯರವರು ಸಿಂಗನಕುಂಟೆ ಗೌಡರವರಿಂದ ದಿನಾಂಕ 23.04.1973 ರಲ್ಲಿ ಖರೀದಿ ಮಾಡಿರುತ್ತಾರೆ ಎಂದು ನಮೂದು ಇರುತ್ತದೆ ಎಂದರೆ ಸಾಕ್ಷಿಯು ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಯಾವುದೇ ಆಸ್ತಿಯು ಉಪನೋಂದಣಾಧಿಕಾರಿ ಕಛೇರಿಯಲ್ಲಿ ನೋಂದಣಿ ಆದ ನಂತರವೇ ಸದರಿ ಆಸ್ತಿಯ ಬಾಬ್ತು ಋಣಭಾರ ರಾಹಿತ್ಯ ಪತ್ರದಲ್ಲಿ ನಮೂದು ಆಗುತ್ತದೆ ಎಂದರೆ ಸರಿ.

1 ನೇ ಪ್ರತಿವಾದಿಯ ಹೆಸರನಲ್ಲಿ 10 ಗುಂಟೆ ಜಮೀನನ್ನು ಹೊರತುಪಡಿಸಿ ಬೇರೆ ಆಸ್ತಿ ಇರುವುದಿಲ್ಲ ಎಂದರೆ ಸರಿ. ಆದಕಾರಣ 1 ನೇ ಪ್ರತಿವಾದಿಗೂ ದಾವಾ ಆಸ್ತಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂಧಿಸಿದಂತೆ ವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ವಿನಾಕಾರಣ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಹಾಜರುಪಡಿಸಿದ ದಾಖಲೆಗಳಲ್ಲಿರುವ ಸಣ್ಣೇಗೌಡರವರು ಸಿದ್ದಮ್ಮರವರ ಗಂಡ ಆಗಿರುತ್ತಾರೆ. ನಾನು ಹಾಜರುಪಡಿಸಿದ ನಿಡಿ-8 ದಾಖಲೆಯನ್ನು ಹೊರತುಪಡಿಸಿ ಉಳಿದ ಯಾವುದೇ ದಾಖಲೆಗಳು ದಾವಾ ಆಸ್ತಿಗೆ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಾವು 10 ಗುಂಟೆ ಜಮೀನಿನೊಳಗೆ ಮನೆಯನ್ನು ಕಟ್ಟಿರುವ ಬಾಬ್ತು ಪಂಚಾಯತಿ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ, ಸಾಕ್ಷಿ ಮುಂದುವರಿದು 10 ಗುಂಟೆ ಜಮೀನಿನ ಪೂರ್ಣ ವಿಸ್ತೀರ್ಣಕ್ಕೆ ಮನೆ ಕಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. 10 ಗುಂಟೆಯ ಪೂರ್ವ ಭಾಗದಲ್ಲಿ ನಮ್ಮ ಮನೆ ಇರುತ್ತದೆ. ಸದರಿ ಮನೆ ಕಟ್ಟಲು ಪಂಚಾಯತಿಯಿಂದ ಪರವಾನಿಗೆಯನ್ನು ಪಡೆದುಕೊಂಡಿರುತ್ತೇವೆ.

ವಾದಿಗಳ ತಂದೆ 3 ¼ ಗುಂಟೆ ಜಮೀನನ್ನು ಕ್ರಯಕ್ಕೆ ಪಡೆದುಕೊಂಡಿದ್ದು, ಸದರಿ ಜಮೀನಿನಲ್ಲಿ ಮನೆಯನ್ನು ನಿರ್ಮಿಸಿಕೊಂಡು ಪಶ್ಚಿಮ ದಿಕ್ಕಿನಲ್ಲಿ ಖಾಲಿ ಜಾಗವನ್ನು ಬಿಟ್ಟುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ವಾದಿಗಳು ಸದರಿ ಖಾಲಿ ಜಾಗದಲ್ಲಿ ಹುಲ್ಲು, ಸೊಪ್ಪು, ಸೌದೆಯನ್ನು ಹಾಕಿಕೊಂಡಿದ್ದು, ಅದಕ್ಕೆ ನಾವು ತೊಂದರೆ ಕೊಡುತ್ತಿದ್ದೇವೆ ಎಂದರೆ ಸರಿಯಲ್ಲ. ಸದರಿ ಖಾಲಿ ಜಾಗದ ದಕ್ಷಿಣ ದಿಕ್ಕಿನಲ್ಲಿ ನಮಗೆ ಸೇರಿದ ಜಾಗ ಇರುತ್ತದೆ. ಸದರಿ ಜಾಗದ ಚೆಕ್ಕುಬಂಧಿ ನನಗೆ ತಿಳಿದಿರುತ್ತದೆ. ಪೂರ್ವಕ್ಕೆ ಸಿದ್ದಮ್ಮರವರ ಖಾಲಿ ನಿವೇಶನ, ಪಶ್ಚಿಮಕ್ಕೆ ರಸ್ತೆ ಮತ್ತು ಕಾಲುವೆ, ಉತ್ತರಕ್ಕೆ ವಾದಿಗಳು ತಮಗೆ ಸೇರಿರುತ್ತದೆ ಎಂದು ವಾದ ಮಾಡುತ್ತಿರುವ ಜಾಗ, ದಕ್ಷಿಣಕ್ಕೆ ನಂಜುಂಡೇಗೌಡರವರ ಖಾಲಿ ನಿವೇಶನ ಇರುತ್ತದೆ.

ಸದರಿ ಖಾಲಿ ಜಾಗಕ್ಕೆ ಸಂಬಂಧಿಸಿದಂತೆ ನಾವು ಯಾವುದೇ ದಾಖಲೆಯನ್ನು ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಗಳ ಸ್ವಾಧೀನಾನುಭವಕ್ಕೆ ನಾವು ವಿನಾಕಾರಣ ತೊಂದರೆ ಕೊಡುತ್ತಿದ್ದೇವೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ:

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸರಿ ಇದೆ.

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**

**ನ್ಯಾಯಾಲಯ ತಿ.ನರಸೀಪುರ.**